ಮಾಡಿತು. ಬಹುಶಃ ಲಾರಿ ತುಂಬ ಹಳೆಯದಾಗಿರಬೇಕು. ಅದರ ಬೋಲ್ಟ್ ನಟ್‌ಗಳು ಸಡಿಲವಾಗಿರಬೇಕು. ಎಂಜಿನ್‌ಗೆ ಎಣ್ಣೆ ಹಾಕಿ ಎಷ್ಟು ಸಮಯವಾಗಿದೆಯೋ, ಅದಕ್ಕೇ ಈ ಹೊಗೆ. ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ಇದನ್ನು ತರಬೇಕು, ಕನಿಷ್ಠ ಬೆಳಗಿನ ಹೊತ್ತಿನಲ್ಲಿ ಇಂಥ ಗಾಡಿ ಓಡಿಸಬೇಡಿ ಎಂದು ತಾಕೀತು ಮಾಡಬೇಕು ಎಂದುಕೊಂಡು ಅವನು ಮುಂದೆ ಹೆಜ್ಜೆ ಹಾಕಿದ.

ಅವನು 'ಜಿಮ್'ನ ಬಳಿಗೆ ಬಂದಾಗ ಅದರ ಮೇಲ್ವಿಚಾರಕ ಆಗಷ್ಟೇ ಬಾಗಿಲು ತೆರೆಯುತ್ತಿದ್ದ ಹಾಗೆ ಕಂಡಿತು. ಬಂದವನನ್ನು ಕಂಡ ಆತ 'ಓ, ನೀವು ಬಂದಿರಾ?' ಎಂದು ತಾನು ಮಾಡುತ್ತಿದ್ದ ಕೆಲಸ ನಿಲ್ಲಿಸಿ, ತಿರುಗಿ ನಿಂತ. ಅವನ ಪ್ರಶ್ನೆಯಲ್ಲಿ ಈತ ಯಾಕಾದರೂ ಬಂದನೋ ಎಂಬ ಛಾಯೆಯಿತ್ತು. ಅಲ್ಲದೆ ಆತನ ಮುಖದ ಮೇಲೆ ವಿಷಾದದ ಮುಗುಳುನಗೆಯನ್ನು ಗಮನಿಸಿ ಆತ ಬಾಗಿಲು ತೆಗೆಯುತ್ತಿದ್ದನೇ ಅಥವಾ ಹಾಕುತ್ತಿದ್ದನೇ ಎಂದು ಅವನಿಗೆ ಗೊಂದಲವಾಯಿತು. ದಿನವೂ ಅವನು ಅಲ್ಲಿಗೆ ಮುಟ್ಟಿದಾಗ ನಾಲ್ಕಾರು ತರುಣರು ಅದಾಗಲೇ ಒಳಗೆ ವ್ಯಾಯಾಮ ನಡೆಸುತ್ತಾ ಇರುತ್ತಿದ್ದರು. ಮೇಲ್ವಿಚಾರಕ ಕೆಲವರಿಗೆ ಮಾರ್ಗದರ್ಶನ ಮಾಡುತ್ತಾ ಇರುತ್ತಿದ್ದ. ಇರುವ ಒಂದೆರಡು ಟ್ರೆಡ್‌ಮಿಲ್‌ಗಳ ಮೇಲೆ ಒಬ್ಬರಲ್ಲ ಒಬ್ಬರು ಓಡುತ್ತಿದ್ದರು.

'ಯಾಕೆ, ಇನ್ನೂ ಯಾರೂ ಬಂದಿಲ್ಲ?' ವ್ಯಾಯಾಮಶಾಲೆಯ ಸುತ್ತ ಕಣ್ಣಾಡಿಸುತ್ತಾ ಅವನು ಮೇಲ್ವಿಚಾರಕನನ್ನು ಕೇಳಿದ. ಆತ ಉತ್ತರಿಸಲಿಲ್ಲ. ಬದಲಾಗಿ, ಕಟ್ಟಿಗೆಯಿಂದ ಕಟ್ಟಿದ ತನ್ನ ಸಣ್ಣ ಕೋಣೆಯೊಳಗೆ ಹೋಗಿ ಮೇಜಿನ ಎದುರು ಕುಳಿತುಕೊಂಡು ತನ್ನ ಕೆಲಸ ಆರಂಭಿಸಿದ. ತನ್ನ ಕೈಚೀಲವನ್ನೂ ಮೈ ಮೇಲೆ ಹಾಕಿದ ಉದ್ದ ಕೈಯ 'ಜರ್ಕಿನ್'ನ್ನೂ ಗೋಡೆಯ ಮೊಳೆಗೆ ತೂಗಹಾಕಿ ಅವನು ವ್ಯಾಯಾಮಕ್ಕೆ ಸಿದ್ಧನಾದ.

ಸುಮಾರು ಒಂದು ಗಂಟೆ ವ್ಯಾಯಾಮ ಮಾಡುವಷ್ಟರಲ್ಲಿ ಅವನ ಮೈಯಿಂದ ದಿರಿದಿರಿ ಬೆವರು ಇಳಿಯತೊಡಗಿತ್ತು. ತಾನು ತಂದ ಚೀಲದಿಂದ ಟವೆಲ್ ಒಂದನ್ನು ಎತ್ತಿ, ಅವನು ಒಂದು ಕಡೆ ಕುಳಿತು ಅದನ್ನು ಚೆನ್ನಾಗಿ ಒರಸಿಕೊಂಡ. ಬಾಟಲಿಯಲ್ಲಿ ತಂದಿದ್ದ ನೀರನ್ನು ಒಂದೆರಡು ಗುಟುಕು ಕುಡಿದು ಸುತ್ತ ಒಮ್ಮೆ ಕಣ್ಣಾಡಿಸಿದ. ಯಾವಾಗಲೂ ಆ ಹೊತ್ತಿಗೆ ಇಪ್ಪತ್ತು ಇಪ್ಪತ್ತೈದು ತರುಣ ತರುಣಿಯರು ಸೇರುವ ವ್ಯಾಯಾಮಶಾಲೆಯಲ್ಲಿ ಒಟ್ಟು ನಾಲ್ಕು ಮಂದಿ ಮಾತ್ರ ಇದ್ದುದು ಅವನಿಗೆ ಆಶ್ಚರ್ಯ ಮೂಡಿಸಿತು. ದೂರದಲ್ಲಿ ಒಬ್ಬಾತ ಭಾರದ ಕಲ್ಲುಗಳನ್ನು ಎತ್ತಿ ಕೈಯ ಸ್ನಾಯುಗಳನ್ನು ಬಲಪಡಿಸುತ್ತಿದ್ದ. ಮೈಗೆ ಅಂಟುವ ಬಟ್ಟೆಗಳನ್ನು ಧರಿಸಿದ ಎಳೆವಯಸ್ಸಿನ ತರುಣಿಯೊಬ್ಬಳು ಸೈಕಲ್ ಮೇಲೆ ಕುಳಿತು ಪೆಡಲ್ ಒತ್ತುತ್ತಿದ್ದಳು. ಆಗತಾನೇ ಒಳಗೆ ಬಂದ ಹೈಸ್ಕೂಲ್ ಹುಡುಗನೊಬ್ಬ ಅವಳ ಬಳಿಗೆ ಹೋಗಿ ದೇಶಾವರಿ ಮಾತುಗಳನ್ನಾಡಲು ಮುಗುಳು ನಗೆಯಿಂದ ಪ್ರಯತ್ನ ಮಾಡುತ್ತಿದ್ದ. ಅವನು ಕಿಟಿಕಿಯ ಮೂಲಕ ಹೊರಗೆ ನೋಡಿದ.

ಅದಾಗಲೇ ಬಿಸಿಲು ಏರಿತ್ತಾದರೂ ತನ್ನ ಹಳದಿ ಬಣ್ಣವನ್ನು ಬಿಟ್ಟುಕೊಟ್ಟಿರಲಿಲ್ಲ. ಅವನು ತನ್ನ ಚೀಲ ಮತ್ತು ಜರ್ಕಿನ್ ಎತ್ತಿಕೊಂಡು ಹೊರಡಲು ಸಿದ್ಧನಾದಾಗ ಮೇಲ್ವಿಚಾರಕ ತನ್ನ ಕೋಣೆಯಿಂದ ಹೊರಗೆ ಬಂದು, 'ನಾಳೆಯಿಂದ ಒಂದು ಮೂರು ದಿನ ಜಿಮ್ ಬಂದಾಗಿರುತ್ತೆ ಸಾರ್' ಎಂದು ಹೇಳಿದ. ಅವನಿಗೆ ಅದರ ಕಾರಣ ತಿಳಿಯುವ ಆಸ್ಥೆಯಿರಲಿಲ್ಲವಾದರೂ 'ಯಾಕೆ?' ಎಂದು ಕೇಳಿ ಉತ್ತರಕ್ಕೆ ಕಾಯದೇ ಹೊರಗೆ ರಸ್ತೆಗೆ ಬಂದ.

ಸಾಧಾರಣವಾಗಿ ಅವನು ಜಿಮ್ ಮುಗಿಸಿ ಮನೆಯ ಕಡೆಗೆ ಹೆಜ್ಜೆ ಹಾಕುವುದಿತ್ತು. ಹೋದ